ಒ.ಎಸ್. ನಂ.6/2020
ಡಿಡಬ್ಲು-1

ದಿನಾಂಕ 24.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದ

ಸರ್ವೆ ನಂ.78 ರಲ್ಲಿ 01-ಎಕರೆ ಜಮೀನು ವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ಸರಕಾರಿ ರಸ್ತೆ ಇದೆ ಎಂದರೆ ಸರಿ. ಸದರಿ ಜಮೀನಿನ ಪಶ್ಚಿಮಕ್ಕೆ ಸರ್ವೆ ನಂ.78 ಇದೆ ಎಂದರೆ ಸರಿ. ವಾದಿಯ ಹೆಸರಿನಲ್ಲಿರುವ 1-ಎಕರೆ ಜಮೀನಿನ ಪಶ್ಚಿಮಕ್ಕೆ ಇರುವ ಸರ್ವೆ ನಂ.78 ರ ಜಮೀನು ಸೋಮಣ್ಣ ತಂದೆ ಹಣಮಂತರಾಯ ನಾಯ್ಕೋಡಿರವರಿಗೆ ಸಂಬಂಧಪಟ್ಟಿದ್ದು ಇರುತ್ತದೆ ಎಂದರೆ ಸರಿ. ವಾದಿಯ ಹೆಸರಿನಲ್ಲಿರುವ 1-ಎಕರೆ ಜಮೀನಿನ ಉತ್ತರ-ದಕ್ಷಿಣ ದಿಕ್ಕಿಗೆ ಪದ್ಮು ನಾಯಕರವರ ಜಮೀನು ಇರುತ್ತದೆ ಎಂದರೆ ಸರಿ. ವಾದಿಯ ಹೆಸರಿನಲ್ಲಿರುವ 1-ಎಕರೆ ಜಮೀನಿನಲ್ಲಿ 12-ಗುಂಟೆ ಜಮೀನಿನಲ್ಲಿ ಪ್ರತಿವಾದಿಯರು ಮನೆ ಕಟ್ಟಿರುತ್ತಾರೆ ಎಂದು ವಾದಿಯು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ 12-ಗುಂಟೆ ಜಮೀನಿನ ಪೂರ್ವ-ಪಶ್ಚಿಮಕ್ಕೆ ವಾದಿಯ ಜಮೀನು ಇದೆ ಎಂದರೆ ಸಾಕ್ಷಿ ಪಶ್ಚಿಮಕ್ಕೆ ಮಾತ್ರ ವಾದಿಯ ಜಮೀನು ಉಳಿದಿರುತ್ತದೆ ಎಂದು ಹೇಳುತ್ತಾರೆ. ವಾದಿಯ ಹೆಸರಿನಲ್ಲಿರುವ 1-ಎಕರೆ ಜಮೀನಿನ ಪೂರ್ವಕ್ಕೆ ಇರುವ ರಸ್ತೆ ಮತ್ತು ಪ್ರತಿವಾದಿಯರು ಕಟ್ಟಿದ ಮನೆಗಳ ಮದ್ಯದಲ್ಲಿ ಇನ್ನೂ ಜಮೀನು ಉಳಿದಿರುತ್ತದೆ ಎಂದರೆ ಸರಿ.

ವಾದಿ ಮತ್ತು ಪ್ರತಿವಾದಿಯರು ಸೇರಿ ವಾದಿಯ ಹೆಸರಿನಲ್ಲಿರುವ ಜಮೀನು ತಲಾ ರೂ.3000/- ಗಳಂತೆ ಒಟ್ಟು ರೂ.27,000/- ಗಳಿಗೆ ಖರೀದಿ ಮಾಡಿರುತ್ತೇವೆ. ಪ್ರತಿವಾದಿಯರು ರೂ.27,000/- ಗಳನ್ನು ಕೊಟ್ಟು ವಾದಿಯ ಹೆಸರಿನಲ್ಲಿರುವ 1-ಎಕರೆ ಜಮೀನನ್ನು ಖರೀದಿ ಮಾಡಿದ ಬಗ್ಗೆ ನಾವು ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ಪ್ರತಿವಾದಿಯರು ಹಾಜರುಪಡಿಸಿದ ದಾಖಲೆಗಳು ಮನೆಗಳಿಗೆ ಸಂಬಂಧಿಸಿದ ದಾಖಲೆಗಳಿದ್ದು ಅವು ದಾವಾಸ್ತಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ